ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೋಂ&ಫ/2014-15.

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12.

ದಿನಾಂಕ: 31 -12-2014.

**ಸುತ್ತೋಲೆ**

**ವಿಷಯ:** 2014-15ನೇ ಸಾಲಿನ ದ್ವಿತೀಯ ಪಿಯುಸಿ ತರಗತಿಗಳಿಗೆ ಪೂರ್ವ ಸಿದ್ಧತಾ ಪರೀಕ್ಷೆಯನ್ನು ರಾಜ್ಯಾದ್ಯಂತ ಏಕಕಾಲದಲ್ಲಿ ನಡೆಸುವ ಕುರಿತು.

* * * * *

ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪದವಿ ಪೂರ್ವ ಶಿಕ್ಷಣ ಒಂದು ಪ್ರಮುಖ ಹಂತವಾಗಿರುತ್ತದೆ. ವಿದ್ಯಾರ್ಥಿಗಳು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಸವಾಲುಗಳನ್ನು ಮತ್ತು ಸ್ಪರ್ಧೆಗಳನ್ನು ಎದುರಿಸಲು ಸಮರ್ಥರಾಗುವಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ಈ ನಿಟ್ಟಿನಲ್ಲಿ ಸಾಧ್ಯವಿರುವ ಎಲ್ಲಾ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಈಗಾಗಲೇ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಸಮಗ್ರವಾಗಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ ಹಾಗೂ ಜೀವಶಾಸ್ತ್ರ ವಿಷಯಗಳಲ್ಲಿ ಮತ್ತು ವಾಣಿಜ್ಯ ಹಾಗೂ ಕಲಾ ಸಂಯೋಜನೆಯ ಕೆಲವು ವಿಷಯಗಳಲ್ಲಿ ವಿಶೇಷ ತರಬೇತಿ ನೀಡಲಾಗಿದೆ.

ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಎದುರಿಸುವಂತಾಗಲು ಪೂರಕವಾಗಿ ರಾಜ್ಯಾದ್ಯಂತ ಏಕ ಕಾಲದಲ್ಲಿ **'ಪೂರ್ವ ಸಿದ್ಧತಾ ಪರೀಕ್ಷೆ'** ನಡೆಸಲು ನಿರ್ಧರಿಸಲಾಗಿದೆ. ಈ ಸಂಬಂಧ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಈ ಪತ್ರಕ್ಕೆ ಲಗತ್ತಿಸಿ ಕಳುಹಿಸಲಾಗುತ್ತಿದೆ. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ, ವಿಭಜಿತ ಹಾಗೂ ಕಾರ್ಪೊರೇಶನ್ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ತಪ್ಪದೆ ಇಲಾಖೆ ನೀಡಿರುವ ವೇಳಾಪಟ್ಟಿಯಂತೆ ಸದರಿ ಪರೀಕ್ಷೆಯನ್ನು ನಡೆಸುವಂತೆ ಸೂಚಿಸಲಾಗಿದೆ.

ಸದರಿ ಪರೀಕ್ಷೆಗೆ ಅಗತ್ಯವಿರುವ ಪ್ರಶ್ನೆ ಪತ್ರಿಕೆಗಳನ್ನು ವಾರ್ಷಿಕ ಪರೀಕ್ಷೆಯ ಮಾದರಿಯಲ್ಲಿಯೇ ಪ್ರತಿ ವಿಷಯದ ಗರಿಷ್ಠ ಅಂಕಗಳನ್ನು ಪರಿಗಣಿಸಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸತಕ್ಕದ್ದು.

ಹೊಸ ಪಠ್ಯಕ್ರಮಾನುಸಾರ ವಾರ್ಷಿಕ ಪರೀಕ್ಷೆಗಳನ್ನು ನಡೆಸಲಾಗುವುದರಿಂದ, ವಿಜ್ಞಾನ ವಿಷಯಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವಾಗ 'Blow-up of Syllabus' ಗೆ ಸೀಮಿತವಾಗಿರದೆ ಪೂರ್ಣ ಪಠ್ಯಕ್ರಮವನ್ನು ಪರಿಗಣನೆಗೆ ತೆಗೆದು ಕೊಳ್ಳಲಾಗುವುದು. ಆದುದರಿಂದ ಪೂರ್ಣ ಪ್ರಮಾಣದ ಸಿದ್ಧತೆಯನ್ನು ನಡೆಸುವಂತೆ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನವನ್ನು ನೀಡತಕ್ಕದ್ದು.

ವಾರ್ಷಿಕ ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳನ್ನು ರಚಿಸುವಾಗ ಪಾಲಿಸುವ ನಿಯಮಗಳನ್ನೇ ಈ ಪರೀಕ್ಷೆಗೂ ಅನುಸರಿಸಲು ಅನುಕೂಲವಾಗುವಂತೆ 'ಪ್ರಶ್ನೆಪತ್ರಿಕೆಗಳನ್ನು ತಯಾರಿಸುವಾಗ ಗಮನಿಸಬೇಕಾದ ಪ್ರಮುಖ ಅಂಶಗಳ' ಮಾರ್ಗ ಸೂಚಿಯನ್ನು ಈ ಪತ್ರಕ್ಕೆ ಲಗತ್ತಿಸಿದೆ. ಪೂರ್ವ ಸಿದ್ಧತಾ ಪರೀಕ್ಷೆಗೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವಾಗ ಮಾರ್ಗ ಸೂಚಿಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ತಪ್ಪದೆ ಪಾಲಿಸತಕ್ಕದ್ದು.

Sd/- 31/12

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು:

1. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
2. ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ.
3. ಜಂಟಿ ನಿರ್ದೇಶಕರು (ಶೈಕ್ಷಣಿಕ)
4. ಸಹಾ ನಿ (ಇ-ಆಡಳಿತ), ಇಲಾಖಾ ಅಂತರ್ ಜಾಲದಲ್ಲಿ ಪ್ರಕಟಿಸಲು.
5. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೋಂ&ಫ/2014-15.

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12.

ದಿನಾಂಕ: 05-01-2015.

## ಸು ತ್ತೋ ಲೆ

**ವಿಷಯ:** 2014-15ನೇ ಸಾಲಿನ ದ್ವಿತೀಯ ಪಿಯುಸಿ ತರಗತಿಗಳಿಗೆ ಪೂರ್ವ ಸಿದ್ಧತಾ ಪರೀಕ್ಷೆಯನ್ನು ರಾಜ್ಯಾದ್ಯಂತ ಏಕಕಾಲದಲ್ಲಿ ನಡೆಸುವ ಕುರಿತು.

**ಉಲ್ಲೇಖ:** ಸಮ ಸಂಖ್ಯೆ ಸುತ್ತೋಲೆ ದಿನಾಂಕ 31-12-2014.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸುತ್ತೋಲೆಯ ಪ್ಯಾರಾ (4) ರಲ್ಲಿ **'ಪೂರ್ಣ ಪಠ್ಯಕ್ರಮ'** ದ ಬದಲಿಗೆ **'~~ಪಠ್ಯ ಪುಸ್ತಕದ ಪೂರ್ಣ ಪಾಠಗಳನ್ನು~~'** (ಪಠ್ಯ ಪುಸ್ತಕವನ್ನು) ಎಂದು ಓದಿಕೊಳ್ಳುವುದು ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಇಲಾಖೆ ನೀಡಿದ **'ಪ್ರಶ್ನೆಪತ್ರಿಕೆಗಳನ್ನು ತಯಾರಿಸುವಾಗ ಗಮನಿಸಬೇಕಾದ ಪ್ರಮುಖ ಅಂಶಗಳ'** ಗಳಲ್ಲಿ ಸಹ ಬದಲಾವಣೆಗಳಿದ್ದು ಬದಲಾವಣೆಗಳೊಂದಿಗೆ ಇಲಾಖಾ ಅಂತರ್ ಜಾಲದಲ್ಲಿ ದಿನಾಂಕ 05-01-2015 ರಂದು ಪ್ರಕಟಿಸಲಾದ **'ಪ್ರಶ್ನೆಪತ್ರಿಕೆಗಳನ್ನು ತಯಾರಿಸುವಾಗ ಗಮನಿಸಬೇಕಾದ ಪ್ರಮುಖ ಅಂಶಗಳ'** ನ್ನು ತಪ್ಪದೆ ಪಾಲಿಸುವುದು.

Kpadbole

**ನಿರ್ದೇಶಕರು,**
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಯನ್ನು:**

1. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
2. ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ.
3. ಜಂಟಿ ನಿರ್ದೇಶಕರು (ಶೈಕ್ಷಣಿಕ)
4. ಸಹಾ ನಿ (ಇ-ಆಡಳಿತ), ಇಲಾಖಾ ಅಂತರ್ ಜಾಲದಲ್ಲಿ ಪ್ರಕಟಿಸಲು.
5. ಕಛೇರಿ ಪ್ರತಿ.

Amend to 79

REVISED

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12

## ದ್ವಿತೀಯ ಪಿಯುಸಿ ಪೂರ್ವ ಸಿದ್ಧತಾ ಪ್ರಶ್ನೆಪತ್ರಿಕೆಗಳನ್ನು ತಯಾರಿಸುವವರು ಗಮನಿಸಬೇಕಾದ ಅಂಶಗಳು

ವಿದ್ಯಾರ್ಥಿಗಳ ಜೀವನದಲ್ಲಿ ಪಿಯುಸಿ ಶಿಕ್ಷಣವು ಒಂದು ಪ್ರಮುಖ ಘಟ್ಟವಾಗಿದೆ. ಅವರ ಭವಿಷ್ಯವನ್ನು ನಿರ್ಧರಿಸುವಲ್ಲಿ ಪಿಯುಸಿ ಶಿಕ್ಷಣವು ನಿರ್ಣಾಯಕ ಪಾತ್ರವನ್ನುವಹಿಸುತ್ತದೆ. ಆದುದರಿಂದ ಪಿ.ಯು.ಸಿ. ಪ್ರಶ್ನೆಪತ್ರಿಕೆ ತಯಾರಿಸುವಾಗ ವೈವಿಧ್ಯಮಯ ವಿದ್ಯಾರ್ಥಿಗಳ ಹಿತ ಕಾಪಾಡುವುದು ಬಹುಮುಖ್ಯ. ಪ್ರಶ್ನೆಪತ್ರಿಕೆ ತಯಾರಿಸುವವರು ಈ ಕೆಳಕಂಡ ಅಂಶಗಳನ್ನು ಹಾಗೂ ವಿಶೇಷ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

1. 'ನೀಲ ನಕ್ಷೆ' ಯನ್ನು ಆಧರಿಸಿ ಪ್ರಶ್ನೆಪತ್ರಿಕೆ ತಯಾರಿಸಬೇಕು. ವಿಷಯದ ವ್ಯಾಪ್ತಿ ಮತ್ತು ಕಠಿಣತೆ ಗಮನದಲ್ಲಿರಿಸಿಕೊಂಡು ಪ್ರತಿಘಟಕ, ಅಧ್ಯಾಯ ಇವುಗಳಿಗೆ ಪಾಠ ಮಾಡಲು ನಿಗಧಿಪಡಿಸಿರುವ ಅವಧಿ, ಅದಕ್ಕೆ ತಕ್ಕಂತೆ ಎಷ್ಟು ಅಂಕಗಳು ಇರಬೇಕು ಎಂದು ನಿರ್ಧರಿಸಿ ನೀಲ ನಕ್ಷೆಯನ್ನು ಸಿದ್ಧಪಡಿಸಿ ಪ್ರಶ್ನೆಪತ್ರಿಕೆ ತಯಾರಿಸಲು ಸಿದ್ಧತೆ ಮಾಡಿಕೊಳ್ಳಬೇಕು.

2. ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಘಟಕ/ಅಧ್ಯಾಯ/ಪಾಠ ಇವುಗಳಿಂದ ಆರಿಸಿದ ಪ್ರಶ್ನೆಗಳು ಇರಲೇಬೇಕು. ಅಂಕ, ಪ್ರಶ್ನೆಯ ನಮೂನೆ ಗರಿಷ್ಠ ಅಂಕಗಳ ಮಿತಿಯೊಳಗೆ ಇರಬೇಕು. ಪ್ರಶ್ನೆಗಳನ್ನು ರಚಿಸುವಾಗ ಆದ್ಯತೆ ಹಾಗೂ ಸಮತೋಲನ ಕಾಪಾಡಿಕೊಳ್ಳಲೇಬೇಕು.

3. ಪ್ರಶ್ನೆಗಳು ನೇರ ಹಾಗೂ ಸ್ಪಷ್ಟವಾಗಿರಬೇಕು. ಯಾವುದೇ ಕಾರಣಕ್ಕೂ ದ್ವಂದ್ವಾರ್ಥ ಅಥವಾ ಸಂಶಯಕ್ಕೆ ಅವಕಾಶವಿರಬಾರದು (Question should not be vague) ಅಲ್ಲದೆ ಯಾವುದೇ ವ್ಯಕ್ತಿ, ಧರ್ಮ, ಜಾತಿಯ ಬಗ್ಗೆ ಪ್ರಶ್ನೆಗಳನ್ನು ಕೇಳುವಾಗ ಪ್ರಶ್ನೆಗಳ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

4. ಪ್ರಶ್ನೆಗಳು ವಿವಿಧ ಅಂಕಗಳ ಪ್ರಶ್ನೆಗಳಲ್ಲಿ ಪುನರಾವರ್ತನೆಯಾಗದಂತೆ ಎಚ್ಚರ ವಹಿಸಬೇಕು.

5. ಪ್ರಶ್ನೆಪತ್ರಿಕೆಯಲ್ಲಿ ನೀಡಲಾದ ಪ್ರಶ್ನೆಗಳು ವಿದ್ಯಾರ್ಥಿಗಳ ಜ್ಞಾನ (Knowledge), ತಿಳುವಳಿಕೆ (Understanding), ಅನ್ವಯ (Application) ಹಾಗೂ ಕೌಶಲ (Skill) ಗಳನ್ನು ಅಳೆಯುವಂತಿರಬೇಕು.

6. ಪ್ರಶ್ನೆಪತ್ರಿಕೆ ವಿದ್ಯಾರ್ಥಿಗಳಲ್ಲಿರುವ ವ್ಯಕ್ತಿ ವಿಭಿನ್ನತೆ (Individual differences) ಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ವಿದ್ಯಾರ್ಥಿಗಳಿಗೆ ಅಂದರೆ ಬುದ್ಧಿವಂತ (Gifted), ಸಾಮಾನ್ಯ (Average), ಹಾಗೂ ನಿಧಾನವಾಗಿ ಕಲಿಯುವ (Slow learner) ವಿದ್ಯಾರ್ಥಿಗಳೆಲ್ಲರಿಗೂ ಅನುಕೂಲವಾಗಿರಬೇಕು. ಇದಕ್ಕಾಗಿ ಸುಲಭ, ಸಾಮಾನ್ಯ ಹಾಗೂ ಕಠಿಣ ಪ್ರಶ್ನೆಗಳನ್ನು (Eassy, Average & Difficult Questions) ಪ್ರಶ್ನೆಪತ್ರಿಕೆ ಒಳಗೊಂಡಿರಬೇಕು.

| | | |
|---|---|---|
| ಸುಲಭ 35% | ಸಾಮಾನ್ಯ 45% | ಕಠಿಣ 20% |

ಪ್ರಶ್ನೆಗಳು – Very short answer, (ಒಂದು ಶಬ್ಧ / ಪದಪುಂಜ / ಒಂದು ವಾಕ್ಯದಲ್ಲಿ ಉತ್ತರಿಸುವ), Short Answer (ಲಘು ಉತ್ತರಗಳು – ಒಂದೆರಡು ವಾಕ್ಯಗಳು, ವಾಕ್ಯವೃಂದದಲ್ಲಿ ಉತ್ತರಿಸುವ), ಹಾಗೂ Long Answer (ದೀರ್ಘ ಉತ್ತರ) ಮತ್ತು Essay Type (ಪ್ರಬಂಧ ರೀತಿಯ) ಪ್ರಶ್ನೆಗಳನ್ನು ಪ್ರತಿನಿಧಿಸಬೇಕು. ಭಾಷಾ ವಿಷಯಗಳಲ್ಲಿ ಪ್ರಶ್ನೆಗಳು ಜ್ಞಾನ (Knowledge), ಗ್ರಹಿಕೆ (Comprehension), ಅಭಿವ್ಯಕ್ತಿ (Expression) ಹಾಗೂ ಮೆಚ್ಚುಗೆ (Appreciation) ಗಳನ್ನು ಮಾಪನ ಮಾಡುವಂತಿರಬೇಕು.

7. ಭಾಷಾ ವಿಷಯಗಳಿಗೆ ಅಂಕಗಳನ್ನು ನಿರ್ಧರಿಸುವಾಗ ಹಂಚಿಕೆಯು ಸೂಕ್ತವಾಗಿರಬೇಕು. ಹಂಚಿಕೆಯ ಮಾದರಿ ಕೊಡಲಾಗಿದೆ.

| Objective | Weight age |
|---|---|
| ಜ್ಞಾನ (Knowledge) | 30% |
| ತಿಳುವಳಿಕೆ (Understanding) / ಗ್ರಹಿಕೆ (Comprehension) | 30% |
| ಅನ್ವಯ (Application) / ಅಭಿವ್ಯಕ್ತಿ (Expression) | 30% |
| ಕೌಶಲ್ಯ (Skill) / ಮೆಚ್ಚುಗೆ (Appreciation) | 10% |

. . . . . 2

8. ಉಳಿದ ವಿಷಯಗಳಿಗೆ ಅಂಕಗಳನ್ನು ನಿರ್ಧರಿಸುವಾಗ ಹಂಚಿಕೆಯು ಸೂಕ್ತವಾಗಿರಬೇಕು. ಹಂಚಿಕೆಯ ಮಾದರಿ ಕೊಡಲಾಗಿದೆ.

| Objective | Weight age |
|---|---|
| ಜ್ಞಾನ (Knowledge) | 35% |
| ತಿಳುವಳಿಕೆ (Understanding) ಹಾಗೂ ಅದರ ಮಂಡನೆ (Presentation) | 30% |
| ಅನ್ವಯ (Application) / Problem solving | 25% |
| ಕೌಶಲ್ಯ (Skill) / ಮೆಚ್ಚುಗೆ (Appreciation) | 10% |

9. ಪ್ರತಿಯೊಂದು ರೀತಿಯ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕು ಎನ್ನುವ ಬಗ್ಗೆ ಸೂಕ್ತ ಸೂಚನೆಗಳಿರಬೇಕು. ಏನು? ಯಾರು? ಯಾವಾಗ? ಎಲ್ಲಿ? ಎಂಬ ರೀತಿಯ ಪ್ರಶ್ನೆಗಳನ್ನು ಕಡಿಮೆ ಮಾಡಿ ಏಕೆ? / (ಕಾರಣ) ಹೇಗೆ? ವ್ಯತ್ಯಾಸ/ಭಿನ್ನತೆ, ವಿವರಿಸಿ ಸ್ಪಷ್ಟೀಕರಿಸಿ, ಸಮರ್ಥಿಸಿ, ಊಹಿಸಿ, ಅಂದಾಜು ಮಾಡಿ ಚರ್ಚಿಸಿ, ತಿಳಿಸಿ, ವಿಶ್ಲೇಷಿಸಿ ಇತ್ಯಾದಿ ರೀತಿಯ ಪ್ರಶ್ನೆಗಳಿಗೆ ಆದ್ಯತೆ ಕೊಡಬೇಕು ಹಾಗೂ ದಿನನತ್ತಯದ ಘಟನೆ / ಚಟುವಟಿಕೆಗಳನ್ನು ಆಧರಿಸಿ Problems ನ್ನು ಪ್ರಶ್ನೆಗಳನ್ನಾಗಿ ತಯಾರಿಸುವುದು. ಪ್ರತಿ ಪ್ರಶ್ನೆಗೂ ಸೂಕ್ತವಾದ ಮಾದರಿ ಉತ್ತರ ರಚಿಸಬೇಕು. (Scheme of Valuation).

10. ನಕ್ಷೆ/ಗ್ರಾಫ್ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ **ಅಂಧ ವಿದ್ಯಾರ್ಥಿಗಳಿಗಾಗಿ ಅಷ್ಟೇ ಅಂಕಗಳಿಗೆ ಸಮಾನವಾಗಿ ಬೇರೆ ಪ್ರಶ್ನೆಗಳನ್ನು ರಚಿಸಬೇಕು.**

11. ವಾರ್ಷಿಕ ಪರೀಕ್ಷೆಯ ಮಾದರಿಯಲ್ಲಿಯೇ ಪ್ರತಿ ವಿಷಯದ ಗರಿಷ್ಠ ಅಂಕಗಳನ್ನು ಪರಿಗಣಿಸಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸತಕ್ಕದ್ದು.

12. ವಿದ್ಯಾರ್ಥಿಯು 3 ಗಂಟೆ ಕಾಲಾವಕಾಶದೊಳಗೆ ಎಲ್ಲಾ ಪ್ರಶ್ನೆಗಳನ್ನು ಸಮರ್ಥವಾಗಿ ಉತ್ತರಿಸುವಂತಿರಬೇಕು. (Time management ಬಹಳ ಮುಖ್ಯವಾಗಿರುತ್ತದೆ)

13. ಹೊಸ ಪಠ್ಯಕ್ರಮದಡಿಯಲ್ಲಿ (**New Syllabus**) ಪಠ್ಯಪುಸ್ತಕದಲ್ಲಿ ಅಳವಡಿಸಲಾದ ಪಠ್ಯಗಳನ್ನು ಆಧರಿಸಿ ವಾರ್ಷಿಕ ಪರೀಕ್ಷೆಗಳನ್ನು ನಡೆಸಲಾಗುವುದರಿಂದ, ವಿಜ್ಞಾನ ವಿಷಯಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವಾಗ (**'Blow-up Syllabus'** ಗೆ ಸೀಮಿತವಾಗಿ) ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸತಕ್ಕದ್ದು.

14. ವಿದ್ಯಾರ್ಥಿಗಳಲ್ಲಿ ವಿಷಯದ ಬಗ್ಗೆ ಆಸಕ್ತಿ ಹುಟ್ಟಿಸುವ ಹಾಗೂ ಜ್ಞಾನವೃದ್ಧಿಯಾಗುವ ನಿಟ್ಟಿನಲ್ಲಿ ಶ್ರಮಿಸುವುದು.

7/1/2015

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು :

1. ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ.
2. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
3. ಜಂಟಿ ನಿರ್ದೇಶಕರು (ಶೈಕ್ಷಣಿಕ).
4. ಸಹಾ ನಿ (ಇ-ಆಡಳಿತ), ಇಲಾಖಾ ಅಂತರ್ ಜಾಲದಲ್ಲಿ ಪ್ರಕಟಿಸಲು.
5. ಕಛೇರಿ ಪ್ರತಿ.